ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಸಿ.ಸಿ./477/2023-24 | 2700 to 2702 ದಿನಾಂಕ: 04.03.2024

## ಪ್ರಾರಂಭಿಕ ಪ್ರಮಾಣ ಪತ್ರ/ Commencement Certificate

**ವಿಷಯ** : ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಹುಸ್ಕೂರು ಗ್ರಾಮದ ಸ.ನಂ. 73/6 ರಲ್ಲಿನ 02 ಎಕರೆ (04 1/2 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನಿಗೆ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದ್ದು, ಸದರಿ ಜಮೀನಿಗೆ ಮಂಡೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಹುಸ್ಕೂರು ಗ್ರಾಮದ ಖಾತಾ ಸಂಖ್ಯೆ: 73/6 ರ ಸ್ವತ್ತಿನ ಸಂಖ್ಯೆ: 150200401601222458 ರಲ್ಲಿ ವಸತಿ ಕಟ್ಟಡ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ**:

1. ಈ ಕಛೇರಿಯ ಮಂಜೂರಾತಿ ಆದೇಶ ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ/51/2022-23, ದಿನಾಂಕ: 10.03.2023.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮಂಡೂರು ಗ್ರಾಮಪಂಚಾಯಿತಿ, ಬೆಂಗಳೂರು ಪೂರ್ವ ತಾಲ್ಲೂಕು ಇವರ ಪತ್ರ ಸಂಖ್ಯೆ: ಮ.ಗ್ರಾ.ಪಂ/161/23-24, ದಿನಾಂಕ: 20.12.2023.
3. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 25.01.2024.
4. ಅರ್ಜಿದಾರರು ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ಕುರಿತು ಮನವಿ ದಿನಾಂಕ: 12.02.2024 ರೊಂದಿಗೆ State Bank of India, Burma Street, Madanapalle Branch ರಲ್ಲಿನ ಡಿ.ಡಿ.ನಂ. 501614, ದಿನಾಂಕ: 12.02.2024, ರೂ. 10,21,500/- (ಈ ಕಛೇರಿಯ ರಶೀದಿ ಸಂಖ್ಯೆ: 5503, ದಿನಾಂಕ: 15.02.2024).

***

**ಪ್ರಸ್ತಾವನೆ:-**

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಪ್ರಸ್ತಾಪಿತ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಹುಸ್ಕೂರು ಗ್ರಾಮದ ಸ.ನಂ. 73/6 ರಲ್ಲಿನ 02 ಎಕರೆ (04 1/2 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನಿಗೆ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಮಂಡೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಹುಸ್ಕೂರು ಗ್ರಾಮದ ಖಾತಾ ಸಂಖ್ಯೆ: 73/6 ರ ಸ್ವತ್ತಿನ ಸಂಖ್ಯೆ: 150200401601222458 ರಂತೆ ಖಾತೆ ತೆರೆಯಲಾಗಿದ್ದು, ಸದರಿ ಖಾತಾ ಸ್ವತ್ತಿನಲ್ಲಿ ವಸತಿ ಕಟ್ಟಡ ನಕ್ಷೆಗೆ ಅನುಮೋದನೆ ನೀಡಲು ಉಲ್ಲೇಖ (2) ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಸಲ್ಲಿಸಲಾದ ಕಟ್ಟಡ ನಕ್ಷೆಗಳನ್ನು ಪರಿಶೀಲಿಸಲಾಗಿ, ಸದರಿ ನಕ್ಷೆಗಳಲ್ಲಿ ಬೇಸ್ಮೆಂಟ್, ನೆಲ ಮತ್ತು 02 ಅಂತಸ್ತುಗಳ (Basement+G+02 Floors) ವಸತಿ ಕಟ್ಟಡವನ್ನು ಒಳಗೊಂಡ ಒಟ್ಟು 30 ವಸತಿ ಘಟಕಗಳನ್ನು ಪ್ರಸ್ತಾಪಿಸಲಾಗಿದೆ. ಅದರಂತೆ, ಉಲ್ಲೇಖ (3) ರಲ್ಲಿ ನಿಗದಿತ ಶುಲ್ಕವನ್ನು ಪಾವತಿಸುವಂತೆ ತಿಳಿಸಲಾಗಿದ್ದು, ಉಲ್ಲೇಖ (4) ರಲ್ಲಿ ಅರ್ಜಿದಾರರು ಶುಲ್ಕವನ್ನು ಈ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

Housiey.com

ಸದರಿ ಕಟ್ಟಡ ನಕ್ಷೆಗಳು ಅನುಮೋದಿತ ವಲಯ ನಿಯಮಾವಳಿಗಳಿಗೆ ಅನುಗುಣವಾಗಿದ್ದು, ಮೇಲೆ ವಿವರಿಸಿರುವ ಅಂಶಗಳ ಮೇರೆಗೆ ಬೇಸ್ಮೆಂಟ್, ನೆಲ ಮತ್ತು 02 ಅಂತಸ್ತುಗಳ (Basement+G+02 Floors) ವಸತಿ ಕಟ್ಟಡವನ್ನು ಒಳಗೊಂಡ ಒಟ್ಟು 30 ಘಟಕಗಳ ವಸತಿ ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡುವ ಸಂಬಂಧ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಹೊಯೋಪ್ರಾ/ಸಿ.ಸಿ./477/2023–24, ದಿನಾಂಕ :** 04 MAR 2024

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಹುಸ್ಕೂರು ಗ್ರಾಮದ ಸ.ನಂ. 73/6 ರಲ್ಲಿನ 02 ಎಕರೆ (04 1/2 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನಿಗೆ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸದಲ್ಲಿನ ಮಂಡೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಹುಸ್ಕೂರು ಗ್ರಾಮದ ಖಾತಾ ಸಂಖ್ಯೆ: 73/6 ರ ಸ್ವತ್ತಿನ ಸಂಖ್ಯೆ: 150200401601222458 ರಲ್ಲಿ ವಸತಿ ಕಟ್ಟಡ ನಕ್ಷೆಗೆ ಅಂದರೆ ಬೇಸ್ಮೆಂಟ್, ನೆಲ ಮತ್ತು 02 ಅಂತಸ್ತುಗಳ (Basement+G+02 Floors) ವಸತಿ ಕಟ್ಟಡವನ್ನು ಒಳಗೊಂಡ ಒಟ್ಟು 30 ಘಟಕಗಳ ಕಟ್ಟಡ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 15 ರನ್ವಯ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.

**ಷರತ್ತುಗಳು:**

1. ಈಗ ನೀಡಿರುವ ಕಟ್ಟಡ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಕಟ್ಟಡ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳದಿದ್ದಲ್ಲಿ, ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಅನುಮೋದಿತ ವಸತಿ ಉದ್ದೇಶದ ಏಕ ನಿವೇಶನ / ನಿವೇಶನದಲ್ಲಿ ಪ್ರಸ್ತಾವಿಸಲಾದ ಕಟ್ಟಡ ನಕ್ಷೆಗೆ ಅನುಗುಣವಾಗಿ ಹಾಗೂ ಈ ಪ್ರಾಧಿಕಾರದಿಂದ ನೀಡಲಾದ ಅನುಮೋದನೆಯಂತೆ ಕಟ್ಟಡವನ್ನು ನಿರ್ಮಿಸತಕ್ಕದ್ದು. ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಈ ಕಛೇರಿಗೆ ಮಾಹಿತಿ ನೀಡತಕ್ಕದ್ದು.
3. ನಿವೇಶನದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಾದ ಮಂಡೂರು ಗ್ರಾಮಪಂಚಾಯಿತಿ ವತಿಯಿಂದ ಪರವಾನಗಿ ಪಡೆಯತಕ್ಕದ್ದು.
4. ಇತರೇ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳಲ್ಲಿನ ನಿಬಂಧನೆ/ಷರತ್ತು ಹಾಗೂ ಇತರೇ ಅಂಶಗಳನ್ನು ತಪ್ಪದೇ ಪಾಲಿಸತಕ್ಕದ್ದು.
5. **ಸದರಿ ಜಮೀನಿನಲ್ಲಿ / ನಿವೇಶನದಲ್ಲಿ ವಸತಿ ಕಟ್ಟಡ ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರ Consent Order No. CTE-125987, PCB ID 182674, ದಿನಾಂಕ: 17.01.2024 ರನ್ವಯ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.**
6. ಸದರಿ ಜಮೀನಿನಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳುವ ಮೊದಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಲಿ., ರವರ ಪತ್ರ ಸಂಖ್ಯೆ: EEE/HKTD/AEE(O)/AE-1/2023-24/11634, ದಿನಾಂಕ: 04.03.2024 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕದ್ದು.
7. ಸದರಿ ಯೋಜನೆಯಲ್ಲಿನ ವಸತಿ ಘಟಕಗಳಿಗೆ ಮೂಲ ಸೌಲಭ್ಯವಾದ ಅಗತ್ಯ ನೀರು ಪೂರೈಕೆ ಬಗ್ಗೆ ಮಂಡೂರು ಗ್ರಾಮಪಂಚಾಯಿತಿ ರವರು ನೀಡಿರುವ ಪತ್ರ ಸಂಖ್ಯೆ: ಮ.ಗ್ರಾ.ಪಂ/161/2023–24, ದಿನಾಂಕ: 20.12.2023 ರಂತೆ ಅಗತ್ಯ ಕ್ರಮ ಜರುಗಿಸಿ ನೀರು ಪೂರೈಕೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವುದು ಹಾಗೂ ಇತರೆ ಮೂಲಗಳಿಂದಲೂ ನೀರು ಪೂರೈಕೆಗೆ ಕ್ರಮ ಜರುಗಿಸುವುದು. **ಸದರಿ ಸ್ಥಳೀಯ ಸಂಸ್ಥೆಯಿಂದ ಪ್ರಸ್ತಾಪಿತ ವಸತಿ ಕಟ್ಟಡಕ್ಕೆ ನೀರನ್ನು ಒದಗಿಸದೇ ಇದ್ದಲ್ಲಿ, ಈ ಬಗ್ಗೆ ಅಭಿವೃದ್ಧಿದಾರರು / ಜಮೀನಿನ ಮಾಲೀಕರು ತಮ್ಮ ಸ್ವಂತ ಖರ್ಚಿನಲ್ಲಿ ನೀರು ಪೂರೈಕೆಗೆ ಅಗತ್ಯ ಕ್ರಮವನ್ನು ಕೈಗೊಳ್ಳುವ ನಿಬಂಧನೆಗೆ ಒಳಪಟ್ಟಿರುತ್ತದೆ.**



Housiey.com

ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಸಿ.ಸಿ./477/2023–24 ದಿನಾಂಕ 04 MAR 2024

8. ಸದರಿ ಜಮೀನಿನಲ್ಲಿ ಪ್ರಸ್ತಾಪಿಸಿರುವ ಕಟ್ಟಡಗಳ ನಿರ್ಮಾಣ ಸಂಬಂಧ ಸಲ್ಲಿಸಿರುವ Er. Shaik Shameer Basha ರವರ ಸ್ಥಿರತೆ ಪ್ರಮಾಣ ಪತ್ರ (Structural Stability Certificate) ದಲ್ಲಿ ತಿಳಿಸಿರುವಂತೆ ಅವರ ಮೇಲ್ವಿಚಾರಣೆಯಲ್ಲಿ ಹಾಗೂ ನಿಯಮಗಳಂತೆ ಕಟ್ಟಡಗಳನ್ನು ನಿರ್ಮಿಸತಕ್ಕದ್ದು ಹಾಗೂ ಸದರಿ ಕಟ್ಟಡದ ಗುಣಮಟ್ಟಕ್ಕೆ ಅರ್ಜಿದಾರರು/ಅಭಿವೃದ್ಧಿದಾರರು ಹಾಗೂ Structural Stability Certificate ನೀಡಿದ ಇಂಜಿನಿಯರ್ ರವರು ಹೊಣೆಗಾರರಾಗಿರುತ್ತಾರೆ. ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
9. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಕಟ್ಟಡ ನಕ್ಷೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
10. ಈ ನಿವೇಶನದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಹಾಗೂ ಹೊಸ ಸಸ್ಯಗಳನ್ನು ಬೆಳೆಸುವುದು.
11. ಸೋಲಾರ್ ವಾಟರ್ ಹೀಟರ್ ಅನ್ನು ಕಟ್ಟಡಗಳಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
12. ಸದರಿ ನಿವೇಶನದಲ್ಲಿ ಮಳೆ ನೀರು ಸಂಗ್ರಹಣಾ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
13. ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ಬಳಸುವುದನ್ನು ನಿಷೇಧಿಸಲಾಗಿದೆ ಹಾಗೂ ಕಾರ್ಮಿಕ ಇಲಾಖೆಯ ಕಾಯ್ದೆ ಮತ್ತು ಆದೇಶಗಳಾನುಸಾರ ವಿಧಿಸಿರುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. ಕಟ್ಟಡ ನಿರ್ಮಾಣದ ಕಾಮಗಾರಿ ಸಂದರ್ಭದಲ್ಲಿ ಕಾರ್ಮಿಕರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಮತ್ತು ಎಲ್ಲಾ ರೀತಿಯ ಸುರಕ್ಷತಾ ವ್ಯವಸ್ಥೆಯನ್ನು ಒದಗಿಸತಕ್ಕದ್ದು.
14. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಶೇಖರಣೆ ಮಾಡಬಾರದು.
15. ಕಟ್ಟಡ ನಡು ಜಾಗ ಪ್ರದೇಶದ ಅಂಚಿನಲ್ಲಿ ಗಿಡ ಮರಗಳನ್ನು ಬೆಳೆಸತಕ್ಕದ್ದು.
16. ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.
17. ಸದರಿ ಪ್ರಸ್ತಾಪಿತ ಜಮೀನಿನಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರ/ಇತರೆ ಸರ್ಕಾರಿ ಇಲಾಖೆಗಳ ಜಮೀನುಗಳು/ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಹಾಗೂ ಖರಾಬು ಜಮೀನುಗಳ ಅಳತೆಗಳು ಮತ್ತು ಅವುಗಳ ವಾಸ್ತವಿಕ ಸ್ಥಳಗಳ ವ್ಯತ್ಯಾಸ ಕಂಡುಬಂದಂತಹ ಸಂದರ್ಭದಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರವು ಅನುಮೋದಿತ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಯನ್ನು/ಕಟ್ಟಡ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಸಂಪೂರ್ಣ ಅಧಿಕಾರ ಹೊಂದಿರುತ್ತದೆ.
18. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
19. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
20. ಸದರಿ ಕಟ್ಟಡದಲ್ಲಿ ವಿಕಲಚೇತನ ಸ್ನೇಹಿ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.
21. ನೈಸರ್ಗಿಕವಾಗಿ ಹರಿಯುವ ನದಿ/ ಹಳ್ಳ /ಕೆರೆ ಮುಂತಾದವುಗಳಿಗೆ ಯಾವುದೇ ಮಲಿನ ನೀರನ್ನು ಬಿಡಬಾರದು.
22. ಶೌಚಕ್ಕೆ ಬಳಸುವ ತ್ಯಾಜ್ಯ ನೀರನ್ನು "ಮರುಬಳಕೆ ಮಾನದಂಡ" ಕ್ಕನುಗುಣವಾಗಿ ಸಂಸ್ಕರಿಸಿದ ನಂತರ ಬಳಸುವುದು.
23. ಸಂಸ್ಕರಿತ ತ್ಯಾಜ್ಯ ನೀರನ್ನು ನಿವೇಶನದಲ್ಲಿನ ಉದ್ಯಾನವನಕ್ಕೆ ಬಳಸುವುದು.

24. ಪಟ್ಟಣ ನಿವೇಶನಗಳ ಸಂಖ್ಯೆಗಳಲ್ಲಿ ಕಾರಣ ಸ್ಥಳದಲ್ಲಿ ಅಳತೆ ಅಂದಾಜಿಸಿದಂತೆ ನೀರಿನ ಮೀಟರ್ ಯಂತ್ರಗಳನ್ನು ಅಳವಡಿಸತಕ್ಕದ್ದು.

25. ಮೇಲ್ಕಂಡ ನಿಬಂಧನೆಗಳ ಜೊತೆಗೆ ಇನ್ನಾವುದೇ ಷರತ್ತುಗಳನ್ನು ಸರ್ಕಾರ ಪ್ರಾಧಿಕಾರವು ಕಾಲಕಾಲಕ್ಕೆ ವಿಧಿಸಿದಲ್ಲಿ ಅಭಿವೃದ್ಧಿದಾರರು ಆ ಎಲ್ಲಾ ಷರತ್ತುಗಳನ್ನು ಪ್ರಾಧಿಕಾರಕ್ಕೆ ಪಾಲಿಸತಕ್ಕದ್ದು.

26. ಮೇಲೆ ತಿಳಿಸಿದ ನಿಬಂಧನೆಗಳಿಗೆ ಒಳಪಟ್ಟು ಸಾರ್ವಜನಿಕ ಉದ್ದೇಶಗಳಿಗೆ ಕಾಯ್ದಿರಿಸಿದ ಪ್ರದೇಶಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಂತೆ ಷರತ್ತು ಪ್ರಾಧಿಕಾರಕ್ಕೆ ಹಸ್ತಾಂತರಿಸತಕ್ಕದ್ದು ಹಾಗೂ ನೋಂದಾಯಿಸತಕ್ಕದ್ದು.

27. ಪ್ರಾಧಿಕಾರವು ವಿಧಿಸುವ ಇನ್ನಾವುದೇ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

28. ಮೇಲ್ಕಂಡ ಯಾವುದೇ ಷರತ್ತುಗಳನ್ನು ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ತಂತಾನೇ ರದ್ದಾಗುತ್ತದೆ.

29. **ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಈ ಆದೇಶದಲ್ಲಿ ಪರಿಗಣಿಸಿದ್ದು, ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಂಬಂಧಪಟ್ಟ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ, ವಸತಿ ವಿನ್ಯಾಸ ನಕ್ಷೆಗೆ ನೀಡಿರುವ ಅನುಮೋದನೆ ತಾನಾಗಿಯೇ** ರದ್ದುಗೊಳ್ಳುತ್ತದೆ.

ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು,
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

**ಪ್ರತಿಗಳನ್ನು :**

1. ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ. 1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ. ಕಾಂಪೌಂಡ್, 3ನೇ ಅಡ್ಡ ರಸ್ತೆ, ಮಿಷನ್ ರಸ್ತೆ, ಬೆಂಗಳೂರು-27 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮಂಡೂರು ಗ್ರಾಮಪಂಚಾಯಿತಿ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು. } ಇವರಿಗೆ ನಕ್ಷೆಯ ಪ್ರತಿಯ ಒಂದು ಪ್ರತಿಯೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

3. ಶ್ರೀ ಕಿಶೋರ್ ಕುಮಾರ್ ಗಟ್ಟು ಬಿನ್ ಮುನಿರಾಮಯ್ಯ ಗಟ್ಟು, ನಿರ್ದೇಶಕರು, ಮೆ॥ ಸವಿಕಾರ ವೆಂಚರ್ಸ್ ಪ್ರೈ. ಲಿ. (ಶ್ರೀಮತಿ ವೆಂಕಟಲಕ್ಷ್ಮಮ್ಮ ಕೋಂ ಲೇಟ್ ನಂಜಪ್ಪ ಮತ್ತು ಇತರರ ಪರವಾಗಿ ಜಿಪಿಎದಾರರು), ನಂ. 136, 10 ಡೌನಿಂಗ್ ಅಲಿಯನ್ಸ್ ವಿಲ್ಲಾ, ಕಾಡುಗೋಡಿ, ಹೊಸಕೋಟೆ ರಸ್ತೆ, ಬೆಂಗಳೂರು-560 067 ರವರಿಗೆ ಮಾಹಿತಿಗಾಗಿ ಕಳುಹಿಸಿದೆ.

4. ಕಛೇರಿ ಪ್ರತಿ

Housiey.com